# ಕರ್ನಾಟಕದಲ್ಲಿ ರಾಮಕೃಷ್ಣ ಭಾವಧಾರೆಗೆ ಸ್ವಾಮಿ ಯತೀಶ್ವರಾನಂದಜಿಯವರ ಕೊಡುಗೆ

**ಸ್ವಾಮಿ ರಾಘವೇಶಾನಂದ**

ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಯತೀಶ್ವರಾನಂದಜಿಯವರು ಕರ್ನಾಟಕದಲ್ಲಿ ಆಧ್ಯಾತ್ಮಿಕ ಭಾವವನ್ನು ಅತ್ಯಂತ ಉಜ್ವಲವಾಗಿ ವಿಸ್ತರಿಸಿದವರು. ಅವರ ಜೀವನ, ಸಾಧನೆಗಳ ಬಗ್ಗೆ ವಿವರಿಸಿರುವ ಲೇಖಕರು ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಾಗಿದ್ದು, ಪ್ರಸ್ತುತ ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಪೂಜ್ಯ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.



ಸ್ವಾಮಿ ಯತೀಶ್ವರಾನಂದಜಿಯವರು ೧೯೫೧ರಿಂದ ೧೯೬೬ರ ಮಧ್ಯಭಾಗದವರೆಗೆ ಬೆಂಗಳೂರು ರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕದಲ್ಲಿ ಅವರ ಇರುವಿಕೆಯೇ ಒಂದು ದೊಡ್ಡ ಕೊಡುಗೆಯಾಗಿತ್ತು. ಇಂದು ಕೂಡ ಅಂದರೆ ಸುಮಾರು ೫೯ ವರ್ಷಗಳ ನಂತರವೂ ಅವರ ಸೂಕ್ಷ್ಮ ಇರುವಿಕೆಯನ್ನು ಭಕ್ತರುಗಳು ನಿರಂತರವಾಗಿ ಅನುಭವಿಸುತ್ತಿದ್ದಾರೆ. ಅದಕ್ಕೆ ಮುಖ್ಯ ಕಾರಣ ಅವರು ನಿರಂತರವಾಗಿ ಮಾನಸಿಕವಾಗಿ ಶ್ರೀರಾಮಕೃಷ್ಣರೊಡನೆ ಬಾಳುತ್ತಿದ್ದರು ಮತ್ತು ಆ ಅನುಭವವನ್ನು ಆಗಾಗ ಅವರ ಭಕ್ತರಿಗೂ ಮಾಡಿಸುತ್ತಿದ್ದರು.

ಒಂದು ಆಶ್ರಮ ಅಥವಾ ಮಠದ ಪವಿತ್ರತೆ ಅಲ್ಲಿರುವ ಸಾಧುವಿನ ಮನಸ್ಸಿನ ಪವಿತ್ರ ಆಲೋಚನೆಗಳಿಂದ ಪ್ರೇರಿತವಾಗಿ, ಅಲ್ಲಿಯ ವಾತಾವರಣವನ್ನು ಶುದ್ಧಗೊಳಿಸಿ, ಅಲ್ಲಿಗೆ ಬಂದವರ ಮೇಲೆ ಗಂಭೀರ ಪರಿಣಾಮವನ್ನುಂಟುಮಾಡಿ, ಅವರನ್ನೂ ಪವಿತ್ರಗೊಳಿಸುತ್ತದೆ ಹಾಗೂ ಅವರ ಜೀವನ ಮಟ್ಟವನ್ನೂ ಸುಧಾರಿಸುತ್ತದೆ. ಸ್ವಾಮಿ ಯತೀಶ್ವರಾನಂದರು ಅಂತಹ ವ್ಯಕ್ತಿಯಾಗಿದ್ದರು. ಅವರು ಪ್ರಾಪಂಚಿಕ ಅಥವಾ ಸಾಂಸಾರಿಕ ವಿಷಯಗಳ ಬಗ್ಗೆ ಚರ್ಚೆ ಮಾಡುವುದನ್ನು ಇಷ್ಟಪಡುತ್ತಿರಲಿಲ್ಲ.

ಒಮ್ಮೆ ಒಬ್ಬ ಶಿಷ್ಯ ಅವರಿಗೆ ಒಂದು ಪತ್ರ ಬರೆದಿದ್ದ. ಅದರಲ್ಲಿ ಬರೀ ಪ್ರಾಪಂಚಿಕ ವಿಷಯವೇ ತುಂಬಿತ್ತು. ಅವರು ಅವನಿಗೆ ಹೀಗೆ ಉತ್ತರಿಸಿದರು. ''ನಾನು ನಿಮಗೆ ಕೇವಲ ಆಧ್ಯಾತ್ಮಿಕ ವಿಷಯಗಳಲ್ಲಿ ಮಾತ್ರ ಸಹಾಯ ಮಾಡಬಲ್ಲೆ. ಯಾವುದೇ ಸಾಂಸಾರಿಕ ವಿಷಯಗಳಲ್ಲಿ ಮೂಗಿಡುವುದಕ್ಕೆ ನನಗೆ ಅಧಿಕಾರವಿಲ್ಲ, ನನ್ನದು ಆ ಕ್ಷೇತ್ರವಲ್ಲ.''

ಅವರು ಬೆಂಗಳೂರು ಆಶ್ರಮದ ಅಧ್ಯಕ್ಷರಾದ ಮೇಲೆ ಪ್ರತಿ ಭಾನುವಾರ ಸಂಜೆ ಆಧ್ಯಾತ್ಮಿಕ ವಿಷಯಗಳ ಮೇಲೆ ಪ್ರವಚನ ಮಾಡುತ್ತಿದ್ದರು. ಪ್ರವಚನಕ್ಕೆ ಮುಂಚೆ ೧೦-೧೫ ನಿಮಿಷಗಳವರೆಗೆ ಎಲ್ಲರಿಂದ ಧ್ಯಾನ ಮಾಡಿಸುತ್ತಿದ್ದರು. ಅವರ ಪ್ರವಚನಗಳೆಲ್ಲವನ್ನೂ ಸಂಗ್ರಹಿಸಿ ಪುಸ್ತಕ ರೂಪದಲ್ಲಿ 'Meditation and Spiritual Life' ಎಂದು ಪ್ರಕಟಿಸಲಾಗಿದೆ. ಅದರ ಕನ್ನಡ ಭಾಷಾಂತರವು 'ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ' ಎಂಬ ಹೆಸರಿನಿಂದ ಪ್ರಕಟವಾಗಿದೆ. ಈ ಎರಡೂ ಪುಸ್ತಕಗಳ ಸಾವಿರಾರು ಪ್ರತಿಗಳು ಖರ್ಚಾಗಿದ್ದು ಈಗಲೂ ಸತತವಾಗಿ ಬೇಡಿಕೆಯಲ್ಲಿವೆ. ಇವು ಕರ್ನಾಟಕಕ್ಕೆ ಸ್ವಾಮೀಜಿಯವರ ವಿಶೇಷ ಕೊಡುಗೆ ಎಂದರೆ ತಪ್ಪಾಗಲಾರದು. ಇವುಗಳು ಸಾವಿರಾರು ಆಧ್ಯಾತ್ಮಿಕ ಸಾಧಕರ ಕೈದೀವಿಗೆಯಾಗಿದ್ದು, ಸಾಧಕರನ್ನು ಆಧ್ಯಾತ್ಮಿಕ ಜೀವನದಲ್ಲಿ ಮುಂದೆ ಮುಂದೆ ಕರೆ

ದೊಯ್ಯುತ್ತಿವೆ. ಇವು ಹೊರಬಂದದ್ದು ೧೯೭೦ನೇ ಇಸವಿಯಲ್ಲಿ. ೫೪ ವರ್ಷಗಳಾದರೂ ಇಂದಿಗೂ ಇವುಗಳಿಗೆ ಸತತವಾಗಿ ಬೇಡಿಕೆಯಿದೆ ಎಂದರೆ ಇವುಗಳು ಎಂತಹ ಗ್ರಂಥವೆಂಬುದು ಅರ್ಥವಾಗುತ್ತದೆ.

ಇವರು ಎಲ್ಲ ಭಕ್ತರುಗಳಿಗೂ ಒಂದೇ ವಿಧವಾದ ಉಪದೇಶಗಳನ್ನು ಕೊಡುತ್ತಿರಲಿಲ್ಲ. ಅವರು ತಮ್ಮ ಪ್ರವಚನಗಳನ್ನು ಕೇಳುವುದಕ್ಕೆ ಮೂರು ಗುಂಪುಗಳಾಗಿ ವಿಭಜಿಸಿಕೊಂಡಿದ್ದರು. ಮೊದಲನೆಯದಾಗಿ ತೀವ್ರವಾಗಿ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿರುವವರಿಗೆ ಪ್ರತ್ಯೇಕವಾಗಿ ಸಂದರ್ಶನ ನೀಡಿ, ಆಧ್ಯಾತ್ಮಿಕತೆಯಲ್ಲಿ ಮುಂದುವರಿಯಲು ಸೂಕ್ತವಾಗಿ ಸಲಹೆಗಳನ್ನು ನೀಡುತ್ತಿದ್ದರು. ಯುವಕರುಗಳಿಗೆ ಜೀವನದಲ್ಲಿ ಒಳ್ಳೆಯ ಜೀವನವನ್ನು ನಡೆಸಲು ವಿವೇಕಾನಂದರ ಉಪದೇಶಗಳನ್ನು ಸೂಕ್ತವಾಗಿ ನೀಡಿ, ಅವರೆಲ್ಲ ಮುಂದೆ ಉತ್ತಮ ಪ್ರಜೆಗಳಾಗುವಂತೆ ಮಾರ್ಗದರ್ಶನ ಮಾಡುತ್ತಿದ್ದರು. ಮಹಿಳೆಯರಿಗಾಗಿ ಪ್ರತ್ಯೇಕವಾಗಿ ಪ್ರತಿ ಬುಧವಾರ ಒಂದು ತರಗತಿ ನಡೆಸಿ ಅದರಲ್ಲಿ ಶ್ರೀಮಾತೆಯವರ ಜೀವನ-ಸಂದೇಶಗಳನ್ನು ಸೂಕ್ತವಾಗಿ ವಿವರಿಸಿ, ಅವರೆಲ್ಲ ಉತ್ತಮ ಗೃಹಿಣಿಯ ಜೀವನ ನಡೆಸುವಂತೆ ಪ್ರೋತ್ಸಾಹ ನೀಡುತ್ತಿದ್ದರು. ಅವರಲ್ಲಿ ಕೆಲವರು ಶಾರದಾ ಮಠಕ್ಕೆ ಸೇರಿ ಸಂನ್ಯಾಸಿನಿಯರಾಗಿ ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ. ಇದಲ್ಲದೆ ಕೆಲವು ವರ್ಷಗಳು ಪ್ರತಿ ಭಾನುವಾರ ಸಾರ್ವಜನಿಕರಿಗಾಗಿ ಪ್ರವಚನಗಳನ್ನು ನೀಡುತ್ತಿದ್ದರು. ಇವುಗಳೆಲ್ಲದರಿಂದ ಬೆಂಗಳೂರು ಆಶ್ರಮಕ್ಕೆ ಹೆಚ್ಚು ಹೆಚ್ಚು ಜನ ಬರಲಾರಂಭಿಸಿದರು. ರಾಮಕೃಷ್ಣ ವಿವೇಕಾನಂದರ ಪುಸ್ತಕಗಳು ಹೆಚ್ಚು ಹೆಚ್ಚು ಪ್ರಚಾರವಾಗಲು ಶುರುವಾಯಿತು. ಬಹಳ ಮಂದಿ ಯುವಕರು ವಿವೇಕಾನಂದರ ಕೃತಿಗಳಿಂದ ಆಕರ್ಷಿತರಾಗಿ ತಮ್ಮ ಜೀವನವನ್ನು ಆದರ್ಶಯುತವಾಗಿ ನಡೆಸಲಾರಂಭಿಸಿದರು. ಹಾಗೆ ಬರುವ ಯುವಕರೊಡನೆ ಸ್ವಾಮಿ ಯತೀಶ್ವರಾನಂದರು ಬಹಳಷ್ಟು ಸಮಯ ಕಳೆದು ಆದರ್ಶ ಜೀವನ ನಡೆಸಲು ಅವರನ್ನೆಲ್ಲಾ ಪ್ರೋತ್ಸಾಹಿಸಿದ್ದರು.

ಇದೇ ಸಮಯದಲ್ಲಿ ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತಿಯುಳ್ಳ ಭಕ್ತರಿಗೆ ಮಂತ್ರದೀಕ್ಷೆಯನ್ನು ಕೊಡಲಾರಂಭಿಸಿದರು. ಕರ್ನಾಟಕದ ಹಲವಾರು ಕಡೆಗಳಿಂದ ಭಕ್ತರು ಬಂದು ಮಂತ್ರದೀಕ್ಷೆ ಪಡೆಯುತ್ತಿದ್ದರು. ಅದೇ ಸಮಯದಲ್ಲಿ ಅವರ ಆಧ್ಯಾತ್ಮಿಕ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುತ್ತಿದ್ದರು. ಆಚಾರ್ಯ ವಿನೋಬಾ ಭಾವೆಯವರು ಸಹ ಬೆಂಗಳೂರು ಆಶ್ರಮಕ್ಕೆ ಭೇಟಿಯಿತ್ತು ಸ್ವಾಮಿ ಯತೀಶ್ವರಾನಂದರೊಡನೆ ಬಹಳ ಸಮಯ ಕಳೆದಿದ್ದರು.

೧೯೧೧ರಲ್ಲಿ ಶ್ರೀಮಾತೆ ಶಾರದಾದೇವಿಯವರು ಬೆಂಗಳೂರಿಗೆ ಭೇಟಿಯಿತ್ತಿದ್ದರು. ಆ ಸಮಯದಲ್ಲಿ ಆಶ್ರಮದ ಹಿಂದೆ ಇದ್ದ ವಿಶಾಲವಾದ ಬಂಡೆಯ ಮೇಲೆ ಒಂದೆಡೆ ಕುಳಿತು ಅದರ ಮುಂದೆ ಇದ್ದ ಕೆರೆಯಲ್ಲಿ ಸೂರ್ಯಾಸ್ತ ಸಮಯದಲ್ಲಿ ಕಾಣುತ್ತಿದ್ದ ಸೂರ್ಯನ ಪ್ರತಿಬಿಂಬವನ್ನು ನೋಡುತ್ತಾ ಧ್ಯಾನಸ್ಥರಾಗಿದ್ದರು. ೪೪ ವರ್ಷಗಳ ನಂತರ ಸ್ವಾಮಿ ಯತೀಶ್ವರಾನಂದರಿಗೆ ಶ್ರೀಮಾತೆಯವರು ಕುಳಿತಿದ್ದ ಸ್ಥಳದಲ್ಲಿ ಶ್ರೀಮಾತೆಯವರ ಒಂದು ಭಾವಚಿತ್ರವವನ್ನು ಇಟ್ಟು ಪೂಜಿಸಬೇಕೆಂಬ ಮನಸ್ಸಾಯಿತು. ಅವರು ಆ ಬಂಡೆಯ ಮೇಲೆ ಹತ್ತಿ ಹೋದಾಗ, ಅದು ಅತ್ಯಂತ ವಿಶಾಲವಾಗಿದ್ದು, ಜಗನ್ಮಾತೆ ನಿರ್ದಿಷ್ಟವಾಗಿ ಯಾವ ಸ್ಥಳದಲ್ಲಿ ಕುಳಿತಿದ್ದರು ಎನ್ನುವುದನ್ನು ಕಂಡು ಹಿಡಯಲಾಗದೆ ನಿರಾಶೆಯಿಂದ ಹಿಂದಿರುಗಿದರು. ಆದರೆ ಕೆಲವು ದಿನಗಳ ಮೇಲೆ ಶ್ರೀಮಾತೆಯವರೇ ಅವರ ಕನಸಿನಲ್ಲಿ ಬಂದು ಅವರಿಗೆ ಆ ನಿರ್ದಿಷ್ಟ ಸ್ಥಳವನ್ನು ತೋರಿಸಿದರಂತೆ. ಅಲ್ಲಿ ಯತೀಶ್ವರಾನಂದರು ಸರಳವಾದ ಕಂಬಿಯ ಒಂದು ಮಂಟಪವನ್ನು ನಿರ್ಮಿಸಿ, ಶ್ರೀಮಾತೆಯವರ ಭಾವಚಿತ್ರವನ್ನಿಟ್ಟು, ಪ್ರತಿ ದಿನ ಬೆಳಿಗ್ಗೆ ಆ ಸ್ಥಳಕ್ಕೆ ಹೋಗಿ, ಶ್ರೀಮಾತೆಯ ಪಾದಕ್ಕೆ ಕೆಲವು ಪುಷ್ಪಗಳನ್ನಿಟ್ಟು ನಮಸ್ಕರಿಸಿ ಬರುತ್ತಿದ್ದರಂತೆ. ಇದು ೧೯೫೫ನೆಯ ಇಸವಿಯಲ್ಲಿ. ಇಂದು ಆ ಸ್ಥಳದಲ್ಲಿ ಭವ್ಯವಾದ ಒಂದು ಕಲ್ಲುಮಂಟಪವೇ ನಿರ್ಮಿಸಲ್ಪಟ್ಟಿದೆ. ಇಂದು ನೂರಾರು ಜನ ಅಲ್ಲಿಗೆ ಭೇಟಿ ಕೊಟ್ಟು, ಶ್ರೀಮಾತೆಯವರಿಗೆ ಪ್ರಣಾಮ ಸಲ್ಲಿಸಿ, ತಮ್ಮ ಮನಸ್ಸಿನ ಕೊರೆಗಳನ್ನೆಲ್ಲಾ ತೋಡಿಕೊಳ್ಳುತ್ತಾರೆ. ಹಲವಾರು ಭಕ್ತರ ಸಂಕಟಗಳನ್ನೆಲ್ಲ ತಾಯಿ ಪರಿಹರಿಸುತ್ತಾರೆಂಬುದು ಪ್ರತೀತಿ.

ಸ್ವಾಮಿ ಯತೀಶ್ವರಾನಂದಜಿಯವರ ಸಮಯದಲ್ಲಿ, ಆಶ್ರಮಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಅದರಲ್ಲೂ ಸಂಜೆಯ ಆರತಿಯ ಸಮಯದಲ್ಲಿ ಪ್ರಾರ್ಥನಾ ಮಂದಿರದಲ್ಲಿ ಜಾಗವಿಲ್ಲದಂತಾಗುತ್ತಿತ್ತು. ಆ ಭಜನೆಗಳು ಎಲ್ಲರೂ ಸೇರಿ ಹಾಡುವುದಾಗಿತ್ತು. ಆಗ ಆಶ್ರಮದವರು 'ಕೀರ್ತನ ಸಂಗ್ರಹ' ಮತ್ತು 'ಜ್ಯೋತಿ' ಎಂಬ ಎರಡು ಪುಸ್ತಕಗಳನ್ನು ಹೊರತಂದರು. ಅವು ಮನೆಮನೆಯನ್ನು ಸೇರಿ ಬಹಳ ಪ್ರಚಾರಗೊಂಡಿತು. ಈಗಲೂ ಆ ಪುಸ್ತಕಗಳು ಪ್ರಕಟವಾಗುತ್ತಿವೆ. ಕರ್ನಾಟಕದ ಎಲ್ಲಾ ಭಾಗಗಳಲ್ಲಿ, ಎಲ್ಲಾ ಭಕ್ತರ ಮನೆ ಸೇರಿ, ಎಲ್ಲೆಡೆ ಭಕ್ತಿಭಾವವನ್ನುಂಟುಮಾಡುತ್ತಿವೆ.

ಆಶ್ರಮದಲ್ಲಿ ನಡೆಯುವ ಎಲ್ಲ ಕಾರ್ಯಗಳೂ ದೈವ ಪ್ರೇರಿತವಾಗಿದ್ದವು ಹಾಗೂ ಸ್ವಾಮಿ ಯತೀಶ್ವರಾನಂದಜಿಯವರು ಆಗಾಗ ನೇರವಾಗಿ ಶ್ರೀರಾಮಕೃಷ್ಣರಿಂದ ಸೂಚನೆಯನ್ನು ಪಡೆಯುತ್ತಿದ್ದರು.

ಒಮ್ಮೆ ಶ್ರೀರಾಮಕೃಷ್ಣರು ಯತೀಶ್ವರಾನಂದಜಿಯವರ ಕನಸಿನಲ್ಲಿ ಬಂದು, 'ನನಗಾಗಿ ಒಂದು ದೇವಸ್ಥಾನವನ್ನು ನಿರ್ಮಿಸು' ಎಂದು ಸಲಹೆ ಕೊಟ್ಟರು. ಅದು ಯತೀಶ್ವರಾನಂದರಿಗೆ ಒಂದು ಸಮಸ್ಯೆಯೇ ಆಯಿತು. ಮುಖ್ಯ ಕಾರಣ ಆರ್ಥಿಕ ಪರಿಸ್ಥಿತಿ. ಯಾವ ಕಡೆಯಿಂದಲೂ ಹಣ ಬರದ ಕಾರಣ, ಆಶ್ರಮದ ಇತರ ಸಾಧುಗಳಿಗೂ ಚಿಂತೆ ಶುರುವಾಯಿತು. ಆದರೆ ಸ್ವಾಮಿ ಯತೀಶ್ವರಾನಂದರ ನಂಬಿಕೆ ಕಡಿಮೆಯಾಗಲಿಲ್ಲ. ಈ ಸೂಚನೆಯನ್ನು ಶ್ರೀರಾಮಕೃಷ್ಣರೇ ಕೊಟ್ಟಿರುವುದು. ಆದುದರಿಂದ ಅದು ಖಂಡಿತವಾಗಿ ನೆರವೇರುತ್ತದೆ. ನಿಧಾನವಾಗಿ ಹಣ ಬರಲು ಶುರುವಾಯಿತು. ಸಾಧುಗಳ ಉತ್ಸಾಹ ಹೆಚ್ಚಿತು. ಯತೀಶ್ವರಾನಂದರು ಪೂರ್ಣವಾಗಿ ಶ್ರೀರಾಮಕೃಷ್ಣರ ಮೇಲೆ ನಿರ್ಭರರಾಗಿದ್ದರು. ಕೊನೆಗೆ ನಾವು ಇಂದಿಗೆ ನೋಡುತ್ತಿರುವ ಅದ್ಭುತವಾದ ಮಂದಿರ ತಯಾರಾಯಿತು. ೧೯೬೯ರ ಆಗಸ್ಟ್‌ನಲ್ಲಿ ಅದರ ಉದ್ಘಾಟನೆ ನೆರವೇರಿತು. ಅಂದಿನಿಂದ ಇಂದಿನವರೆಗೆ ನೂರಾರು, ಸಾವಿರಾರು ಭಕ್ತರಿಗೆ ಆಧ್ಯಾತ್ಮಿಕ ತಾಣವಾಗಿ, ಆಧ್ಯಾತ್ಮಿಕ ಜೀವನದಲ್ಲಿ ಶಾಂತಿ, ಆನಂದ ಕೊಡುತ್ತಿರುವ ಮಂದಿರವಾಗಿದೆ. ಇದರ ಒಂದು ಉತ್ತೇಜನದಿಂದ ಕರ್ನಾ

ಟಕದ ಹಲವಾರು ಭಾಗಗಳಲ್ಲಿ ಶ್ರೀರಾಮಕೃಷ್ಣ ಆಶ್ರಮಗಳು ಶುರುವಾಗಿವೆ, ಇನ್ನೂ ಆ ಕಾರ್ಯ ನಡೆಯುತ್ತಲೇ ಇದೆ.

ಕರ್ನಾಟಕಕ್ಕೆ ಸ್ವಾಮಿ ಯತೀಶ್ವರಾನಂದರ ಮತ್ತೊಂದು ಕೊಡುಗೆಯೆಂದರೆ **'ಶ್ರೀರಾಮಕೃಷ್ಣ ವಿದ್ಯಾರ್ಥಿಮಂದಿರ'**. ೧೯೫೭ರಲ್ಲಿ ಒಂದು ಹೊಸ ವಿದ್ಯಾರ್ಥಿ ಮಂದಿರವನ್ನು ನಿರ್ಮಿಸಲಾಯಿತು. ಇದು ಮುಖ್ಯವಾಗಿ ದೂರದ ಹಳ್ಳಿಗಳಿಂದ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳಿಗಾಗಿ. ಈ ವಿದ್ಯಾರ್ಥಿಗಳು ಕಾಲೇಜು ವಿದ್ಯಾಭ್ಯಾಸದ ಜೊತೆಗೆ, ನೈತಿಕ ಶಿಕ್ಷಣ, ಯೋಗಾಭ್ಯಾಸ, ಜಿಮ್ನಾಶಿಯಂ, ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಪ್ರಾರ್ಥನೆ ಇತ್ಯಾದಿಗಳೊಂದಿಗೆ ಮುಂದೆ ಉತ್ತಮ ಪ್ರಜೆಗಳಾಗಿ ತಮ್ಮ ಜೀವನವನ್ನು ಸುಂದರವಾಗಿ ರೂಪಿಸಿಕೊಳ್ಳುವ ಉತ್ತಮ ಅವಕಾಶವನ್ನು ಪಡೆಯುತ್ತಿದ್ದಾರೆ. ಪ್ರತಿವರ್ಷ ಸುಮಾರು ನೂರು ಜನ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

Man making and charcter building ಎನ್ನುವ ಸ್ವಾಮಿ ವಿವೇಕಾನಂದರ ಧ್ಯೇಯ ಸ್ವಾಮಿ ಯತೀಶ್ವರಾನಂದಜಿಯವರ ಮನಸ್ಸಿನಲ್ಲಿ ಸದಾ ಜಾಗೃತವಾಗಿತ್ತು. ಈ ನಿಟ್ಟಿನಲ್ಲಿ ಅವರ ಮನಸ್ಸಿನಲ್ಲಿ ಹೊಸ ಹೊಸ ಯೋಜನೆಗಳು ಬರುತ್ತಲೇ ಇದ್ದವು. ಅವರ ಹೊಸ ಮುಂದಿನ ಕಾರ್ಯ **'ವಿವೇಕಾನಂದ ಬಾಲಕ ಸಂಘ.'** ೭ರಿಂದ ೧೫ ವರ್ಷದವರೆಗಿನ ಶಾಲಾಮಕ್ಕಳಿಗೆ ಪ್ರತಿದಿನ ಸಂಜೆ ಹಾಗೂ ಭಾನುವಾರ ಬೆಳಗಿನ ಅರ್ಧ ದಿನ ಶಿಕ್ಷಣ ಕೊಡುವುದೆಂದು ತೀರ್ಮಾನವಾಗಿತ್ತು. ಈ ಒಂದು ಹೊಸ ಕಾರ್ಯಕ್ರಮ ಎಲ್ಲಾ ಪೋಷಕರಿಂದ ಪ್ರೋತ್ಸಾಹಿಸಲ್ಪಟ್ಟಿತು. ಮೊದಲ ದಿನವೇ ಸುಮಾರು ೨೦೦ ಮಕ್ಕಳು ನೋಂದಾಯಿಸಿಕೊಂಡಿದ್ದರು. ಬಾಲಕ ಸಂಘದ ಚಟುವಟಿಕೆಗಳೆಂದರೆ ಭಜನೆ, ವೇದ ಪಾರಾಯಣ, ನೀತಿಕಥೆಗಳು, ಯೋಗ, ಆಟ ಇತ್ಯಾದಿ, ಇತ್ಯಾದಿ. ಸಂನ್ಯಾಸಿಗಳು ಹಲವಾರು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಎಲ್ಲಾ ಉತ್ಸವಗಳಲ್ಲಿ ಈ ಪುಟ್ಟ ಬಾಲಕರು ಸ್ವಯಂಸೇವಕರಾಗಿ ತುಂಬ ಉತ್ಸಾಹದಿಂದ ಸೇವೆ ಸಲ್ಲಿಸುತ್ತಾರೆ. ಈ ಬಾಲಕ ಸಂಘ ಇಡೀ ಕರ್ನಾಟಕಕ್ಕೆ ಸ್ವಾಮಿ ಯತೀಶ್ವರಾನಂದರ ಒಂದು ವಿಶೇಷ ಕೊಡುಗೆ ಎಂದು ಹೇಳಬಹುದು. ಒಮ್ಮೆ ಒಬ್ಬರು ವಯಸ್ಸಾದ ಮುದುಕರು ಸ್ವಾಮಿ ಯತೀಶ್ವರಾನಂದರ ಬಳಿ ಬಂದು, ''ಸ್ವಾಮೀಜಿ, ನಾನು ನಿಮ್ಮ ಬಳಿ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸಬೇಕು'' ಎಂದರು. ಯತೀಶ್ವರಾನಂದಜಿ ಅವರನ್ನು ಅಪಾದಮಸ್ತಕ ನೋಡಿ, ''ನಿಮಗೆ ಮದುವೆಯಾಗಿದೆಯೆ?'' ಎಂದು ಕೇಳಿದರು. ಅವರು ''ಹೌದು'' ಎಂದು ತಲೆಯಾಡಿಸಿದರು. ''ನಿಮಗೆ ಮಕ್ಕಳಿದ್ದಾರೆಯೆ?'' ''ಹೌದು, ಹನ್ನೆರಡು ವರ್ಷದ ಮಗನಿದ್ದಾನೆ'' ಎಂದರು. ಸಂತೋಷದಿಂದ ಸ್ವಾಮೀಜಿ ''ಹಾ! ಅವನನ್ನು ಕರೆದುಕೊಂಡು ಬನ್ನಿ. ಅವನಿಗೆ ಆಧ್ಯಾತ್ಮಿಕ ಬೋಧನೆಗಳನ್ನು ಕೊಟ್ಟರೆ, ಅವನ ಜೀವನಕ್ಕೆ ಒಳ್ಳೆಯದಾಗುವುದು'' ಎಂದರು. ✽


*With best Compliments from*

# S.V. Rangaswamy & Co. Pvt. Ltd.

No. 2, 3rd Cross, Kalasipalyam, New Extension, Bangalore - 560 002

**DISTRIBUTORS**

**ASPEE :** Agricultural Sprayers & Farm Mechanization Equipments (Brush Cutters, Rotary Tillers, Tractamounted Power Sprayers, HTP Power Sprayers, High Pressure Knapsack Power & Manual Sprayers, battery Sprayers, Gator, Marut, Napsak, Hitech Sprayers & Spray Nozzles.)

Horiculture Tools & Lawn Mowers

DUPLON Spray Hoses

Agro Shade Nets Hoses

**Reliance Industries Ltd. :** Polymester Staple Fiber, Fiber Fill and Polyester Wadding

**Bayer Crop Sciences :** Agro Chemicals

**Lanxess india Pvt. Ltd. :** Rubber Chemicals / Rhein Chemie Products

**Chemtrend Chemicals Pvt. Ltd. :** Release Agents

**Envalior India Pvt. Ltd. :** (Divn: Engineering Materials) - Plastic Granules (Industial inputs)